"ಗೇಮ್ ಓವರ್ ಮಿ. ಬಿಜು. ನಾಟಕ ತುಂಬಾ ಚೆನ್ನಾಗಿ ಆಡಿದಿರಿ. ಇವತ್ತು ಬೆಳಗಿನ ತನಕ ನಾನೂ ನಂಬಿದ್ದೆ. ಆದ್ರೆ ಈಗ ನನಗೆ ಖಚಿತವಾಗಿದೆ. ಲೂಸಿಯ ತಂದೆಯ ಆಸ್ತಿ, ಅವಳ ಇನ್‌ಶ್ಯೂರೆನ್ಸ್ ಹಣದ ಆಸೆ, ಮತ್ತು ಅವಳಿಂದ ಮಕ್ಕಳಾಗುವುದಿಲ್ಲ ಎನ್ನುವ ಕೊರಗು... ಈ ಮೂರೂ ನೀವು ಕೊಲೆ ಮಾಡಿದ್ದಕ್ಕೆ ಇದ್ದ ಮೋಟಿವ್."

ಗಂಭೀರ ಧ್ವನಿಯಲ್ಲಿ ನುಡಿಯುತ್ತಾ, ತನ್ನ ಸೀಟಿನಿಂದ ಮೇಲೆದ್ದು, ಬಿಜು ಕುಳಿತಿದ್ದ ಕುರ್ಚಿಯ ಹಿಂಭಾಗದಲ್ಲಿ ನಿಂತು ಅವನ ಭುಜಗಳ ಮೇಲೆ ಕೈಯಿಟ್ಟ.

"ನೋ... ಇದು ಹೇಗೆ ಸಾಧ್ಯ? ಲೂಸಿ ಸತ್ತ ಸಮಯದಲ್ಲಿ ಬಿಜು ಅಲ್ಲಿರಲೇ ಇಲ್ಲ. ನಮ್ಮ ಜೊತೆ ಇದ್ದ." ಡಿಮೆಲೋ ಆಶ್ಚರ್ಯದಿಂದ ಕೇಳಿದ.

"ನಿಮ್ಮ ಸ್ನೇಹಿತ ಸುಮಾರು ಆರೂವರೆಯ ಆಸುಪಾಸಿನಲ್ಲಿ... ಲೂಸಿಯ ಜೊತೆ ಊಟ ಮಾಡಿ, ನಂತರ ಲೂಸಿಯನ್ನು ಅವಳದೇ ವೇಲ್‌ನಿಂದ ಬಿಗಿದು ಸಾಯಿಸಿ, ನೀಟಾಗಿ ಮಂಚದಮೇಲೆ ಮಲಗಿಸಿ, ನಂತರ, ತಾನು ತಿಂದ ತಟ್ಟೆಯನ್ನು ತೊಳೆದಿಟ್ಟು, ಯಾರೋ ಬಂದಿದ್ದಾರೆ ಎಂದು ಅನುಮಾನ ಬರುವಷ್ಟು ಮಾತ್ರ ಕ್ಲೂಗಳನ್ನು ಅಲ್ಲಲ್ಲಿ ಬಿಟ್ಟು, ಬಾಲ್ಕನಿಯ ಬಾಗಿಲಿಂದ ಹೊರಬಂದು, ಕಿಟಕಿಯ ಮುಖಾಂತರ ಮತ್ತೆ ಆ ಬಾಗಿಲೂ ಹಾಕಿ, ಕೆಳಗಿಳಿದು, ಡಿಮೆಲೋ ಬಂದಾಗ ಕಾರ್ ಹತ್ತಿ ಹೊರಟಿದ್ದಾರೆ. ನಿಮಗೆ ಆ ಕ್ಷಣಕ್ಕೆ ಲೂಸಿ ಅಲ್ಲೇ ಇದ್ದಾಳೆ ಎನ್ನುವ ಭಾವನೆ ಬರಲೆಂದು, ಖಾಲಿ ಬಾಲ್ಕನಿಯ ಕಡೆ ಕೈ ಬೀಸಿ ಬಾಯ್ ಮಾಡಿದ್ದಾರೆ... ನಂತರ ಏನೂ ಗೊತ್ತಿಲ್ಲದಂತೆ ಫೋನ್‌ಗಳು, ಆತಂಕ, ಎಲ್ಲಾ ತೋರಿಸಿ, ಜೀವನ್ ಮುಖಾಂತರ ಲೂಸಿಯ ಶವ ಪತ್ತೆಯಾಗುವಂತೆ ಮಾಡಿದ್ದಾರೆ. ವಾವ್... ಬ್ರಿಲಿಯಂಟ್ ಪ್ಲಾನ್... ಪರ್ಫೆಕ್ಟ್ ಅಲಬೈ..."

ಅಲ್ಲಿಯವರೆಗೂ ಶಾಂತನಾಗಿ ಆಲಿಸುತ್ತಿದ್ದ ಬಿಜು...

"ಕತೆ ಚೆನ್ನಾಗಿದೆ... ಆದರೆ ನಿಮ್ಮದೇ ಪೋಸ್ಟ್‌ಮಾರ್ಟಂ ರಿಪೋರ್ಟಿನಲ್ಲಿ, ಲೂಸಿಯ ಸಾವು ಸುಮಾರು ಒಂಬತ್ತರ ಆಸುಪಾಸಿನಲ್ಲಿ ನಡೆದಿದೆ ಅಂತ ಬರೆದಿದ್ದಾರೆ. ನೆನಪಿರಲಿ. ಯಾರೂ ಸಿಗಲಿಲ್ಲ ಅಂತ ನಾನೇ ಟಾರ್ಗೆಟ್ ಆದೇನಾ?"

"ನಿಜ, ಅದೂ ನಿಜ. ನಾನು ಹೇಳಿದ್ದೂ ನಿಜ..." ವ್ಯಂಗ್ಯವಾಗಿ ನಗುತ್ತಾ ಹೇಳಿದ ರುದ್ರೇಶ್.

"ಅಂದರೆ ಪೋಸ್ಟ್‌ಮಾರ್ಟಂ ರಿಪೋರ್ಟ್? ಇದು ಹೇಗೆ ಸಾಧ್ಯ ಸರ್?" ಡಿಮೆಲೋ ಪ್ರಶ್ನಿಸಿದ.

"ಈ ಪ್ಲಾನಿಂಗ್ ಶುರುವಾಗಿದ್ದು, ಎರಡು ತಿಂಗಳ ಹಿಂದೆ. ನಿಮ್ಮ ಸ್ನೇಹಿತ ತನ್ನ ಚಿಕ್ಕ ಬೆಡ್‌ರೂಮಿಗೆ ಎರಡು ಟನ್ ಎ.ಸಿ. ಹಾಕಿಸಿದ್ದರು. ಕಾರಣ ಲೂಸಿಯ ಕೊಲೆ! ಸುಮಾರು ಏಳರ ಆಸುಪಾಸಿನಲ್ಲಿ ಲೂಸಿಯ ಕೊಲೆ ಮಾಡಿ, ಬೆಡ್‌ರೂಂನಲ್ಲಿ ಮಲಗಿಸಿ, ಎ.ಸಿ. ಆನ್ ಮಾಡಿದ್ದಾರೆ. ಕೆಲವೇ ಕ್ಷಣಗಳಲ್ಲಿ ಇಡೀ ರೂಂ ಶೈತ್ಯಾಗಾರದಂತೆ ತಂಪಾಗಿದೆ. ಸಾಮಾನ್ಯವಾಗಿ ಕರೆಂಟಿನಿಂದ ಓಡುವಾಗ ಕಂಪ್ರೆಸರ್, ಆಗಾಗ್ಗೆ ಆಫ್ ಆಗುತ್ತದೆ. ಅದನ್ನು ತಪ್ಪಿಸಲು, ಇನ್ವರ್ಟರ್‌ನಿಂದ ಓಡುವಂತೆ ಮಾಡಿದ್ದಾರೆ. ಶೀತ ವಾತಾವರಣದಿಂದಾಗಿ ಶವದ ರೈಗರ್ ಮಾರ್ಟಿಸ್ ಪ್ರಕ್ರಿಯೆ, ಅಂದರೆ ಶವ ಬಿಗುವಾಗುವ ಪ್ರಕ್ರಿಯೆ ನಿಧಾನವಾಗಿದೆ. ಸುಮಾರು ಎರಡು ಗಂಟೆ ಉರಿದ ನಂತರ, ಇನ್ವರ್ಟರ್ ಆಫ್ ಆಗಿದೆ. ಇಡೀ ಮನೆಯ ಲೈಟ್ ಆಫ್ ಆಗಿದೆ. ಶವ ಪರೀಕ್ಷೆ ಮಾಡಿದಾಗ ಇದೇ ಕಾರಣದಿಂದ ಪೋಸ್ಟ್‌ಮಾರ್ಟಂ ರಿಪೋರ್ಟ್‌ನಲ್ಲಿ ಮರಣದ ಸರಿಯಾದ ಸಮಯ ನಿಗದಿಯಾಗಿಲ್ಲ. ಎ.ಸಿ. ಆಫ್ ಆದ ಮೇಲಿನಿಂದ ಶವ ಬಿಗುವಾಗುವಿಕೆ ವೇಗವಾಗಿ ಆಗಿದೆ. ಹಾಗಾಗಿ ಸಮಯ ಕೂಡಾ ತಪ್ಪಾಗಿದೆ. ಇದೆಲ್ಲದರ ಬಗ್ಗೆ ಯಾವುದೇ ಅನುಮಾನ ಬರದಿದ್ದ ಕಾರಣ ಅದನ್ನು ಸೂಕ್ಷ್ಮವಾಗಿ ಗಮನಿಸಲಿಲ್ಲ. ಬಿಜು, ದಾಬಾದ ಗಲಾಟೆ, ಮತ್ತೆ ಮತ್ತೆ ಮನೆಗೆ ಮಾಡುತ್ತಿದ್ದ ಫೋನ್ ಇವೆಲ್ಲಾ ತಾನು ಬೇರೆ ಕಡೆ ಇದ್ದೆ ಅನ್ನುವ ಅಲಬೈ ಸೃಷ್ಟಿಸಲು. ಆ ಅಲಬೈ ವರ್ಕ್ ಆಯಿತು. ಯಾಕೆಂದರೆ ನಾವು ಹೀಗೆಯೇ ತನಿಖೆ